# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ಗೋವಿಂದ ರಾಜು<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 18(36) |
| ಉತ್ತರಿಸಬೇಕಾದ ದಿನಾಂಕ | 13.02.2024 |
| ಉತ್ತರಿಸಬೇಕಾದವರು | ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೋಲಾರ ನಗರ ವ್ಯಾಪ್ತಿಯಲ್ಲಿ ಯು.ಜಿ.ಡಿ ನಿರ್ವಹಣೆಯು ಅಸಮರ್ಪಕವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಕಾಮಗಾರಿಗೆ ಮಂಜೂರಾಗಿರುವ ಅನುದಾನವೆಷ್ಟು; | ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಕೋಲಾರ ನಗರ ವ್ಯಾಪ್ತಿಯಲ್ಲಿ ಅಮೃತ್ ಯೋಜನೆಯಡಿಯಲ್ಲಿ ಯು.ಜಿ.ಡಿ. ಕಾಮಗಾರಿಯನ್ನು ಕೈಗೊಳ್ಳಲಾಗಿದ್ದು, ಸದರಿ ಕಾಮಗಾರಿಗೆ ರೂ.72.55 ಕೋಟಿಗಳ ಅನುದಾನ ಮಂಜೂರಾಗಿರುತ್ತದೆ. |
| ಆ) | ಕೇಂದ್ರ ಸರ್ಕಾರದ ಪುರಸ್ಕೃತ ಯೋಜನೆಯಾಗಿರುವ ಅಮೃತ್ ಯೋಜನೆ-1 ರಲ್ಲಿ ಯು.ಜಿ.ಡಿ ಕಾಮಗಾರಿ ನಡೆದಿದ್ದು, ಮ್ಯಾನ್-ಹೋಲ್‌ಗಳ ನಿರ್ಮಾಣವಾಗಿ ತಿಂಗಳು ಕಳೆಯುವ ಹೊತ್ತಿಗೆ ಹಾನಿಯಾಗಿದ್ದು, ಈ ಕಳಪೆ ಕಾಮಗಾರಿಗೆ ಯಾರನ್ನು ಹೊಣೆ ಮಾಡಲಾಗಿದೆ; | ಕೋಲಾರ ನಗರಕ್ಕೆ ಅಮೃತ್-1.0 ಯೋಜನೆಯಡಿ ಒಳಚರಂಡಿ ವ್ಯವಸ್ಥೆಯನ್ನು ಒದಗಿಸುವ ಒಳಚರಂಡಿ ಕೊಳವೆ ಮಾರ್ಗವನ್ನು ಅಳವಡಿಸುವ ಕಾಮಗಾರಿಯನ್ನು ದಿನಾಂಕ:08.12.2020 ರಂದು ಪೂರ್ಣಗೊಳಿಸಲಾಗಿದ್ದು, ಇತರೆ ಕಾಮಗಾರಿಗಳನ್ನು ದಿನಾಂಕ: 24.05.2022 ರಂದು ಪೂರ್ಣಗೊಳಿಸಲಾಗಿರುತ್ತದೆ. ಸದರಿ ಯೋಜನೆಯಡಿ ಅಳವಡಿಸಲಾಗಿದ್ದ ಒಳಚರಂಡಿ ಕೊಳವೆ ಮಾರ್ಗವನ್ನು ಗುತ್ತಿಗೆದಾರರು ದಿನಾಂಕ:31.12.2020 ರಿಂದ ದಿನಾಂಕ:22.02.2022 ರವರೆಗೂ ನಿರ್ವಹಿಸಿರುತ್ತಾರೆ. ಕಾಮಗಾರಿಯನ್ನು ಪೂರ್ಣಗೊಳಿಸಿದ ನಂತರ 1 ವರ್ಷದ DLP ಅವಧಿಯು ದಿನಾಂಕ:23.05.2023 ರಂದು ಪೂರ್ಣಗೊಂಡಿರುತ್ತದೆ.<br><br>ಯಂತ್ರಗುಂಡಿಗಳ ನಿರ್ಮಾಣವಾಗಿ ತಿಂಗಳು ಕಳೆಯುವ ಹೊತ್ತಿಗೆ ಕಳಪೆ ಕಾಮಗಾರಿಯಿಂದ ಹಾನಿಯಾಗಿರುವ ಕುರಿತು ಯಾವುದೇ ಪ್ರಕರಣ ವರದಿಯಾಗಿರುವುದಿಲ್ಲ. ಇತರೆ ಇಲಾಖೆಯಿಂದ ರಸ್ತೆ ಅಭಿವೃದ್ಧಿ ಹಾಗೂ ಇತರೆ ಕಾಮಗಾರಿಗಳ ಅನುಷ್ಠಾನದ ವೇಳೆ ಯಂತ್ರಗುಂಡಿಗಳಿಗೆ ಹಾನಿಯಾಗಿರುತ್ತದೆ. ಈ ಸಂಬಂಧ ಲೋಕೋಪಯೋಗಿ ಇಲಾಖೆಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಮಂಡಳಿ ವತಿಯಿಂದ ದಿನಾಂಕ:21.12.2021 ರಂದು ಪತ್ರ ಬರೆಯಲಾಗಿರುತ್ತದೆ. ನಗರಸಭೆಯ ಕೋರಿಕೆಯಂತೆ ಒಳಚರಂಡಿ ಯೋಜನೆಯ ನಿರ್ವಹಣೆಯನ್ನು ದಿನಾಂಕ:06.04.2022 ರಂದು Jetting / Sucking machine ಅನ್ನು ನಗರಸಭೆಗೆ ಹಸ್ತಾಂತರಿಸಲಾಗಿರುತ್ತದೆ. |

| | | |
|---|---|---|
| | | ನಂತರ ಯಂತ್ರ ಗುಂಡಿಗಳ ದುರಸ್ತಿ ಮತ್ತು ನಿರ್ವಹಣೆ ಕಾಮಗಾರಿಗಳನ್ನು ನಗರಸಭೆ ವತಿಯಿಂದಲೇ ಕೈಗೊಳ್ಳಲಾಗುತ್ತಿದೆ. |
| ಇ) | ಸದರಿ ಕಾಮಗಾರಿಯನ್ನು ಯಾವ ಸಂಸ್ಥೆಗೆ ವಹಿಸಲಾಗಿದೆ ಹಾಗೂ ಟೆಂಡರ್ ಅನುಮೋದನೆ ನೀಡುವ ಸಂದರ್ಭದಲ್ಲಿ ಇಂತಿಷ್ಟು ವರ್ಷದವರೆಗೂ ನಿರ್ವಹಣೆಯನ್ನು ಮಾಡಬೇಕೆಂಬ ನಿಯಮ ಇದೆಯೇ; | ಅಮೃತ್-1.0 ಯೋಜನೆಯಡಿ ಕೋಲಾರ ನಗರಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಒದಗಿಸುವ ಕಾಮಗಾರಿಯನ್ನು ಟೆಂಡರ್ ಆಧಾರದ ಮೇಲೆ ಮೆ// ಜಯಂತಿ ಸೂಪರ್ ಕನ್ಸ್ ಟ್ರಕ್ಷನ್, ಮೆಹಸಾನ, ಗುಜರಾತ್‌ರವರಿಗೆ ವಹಿಸಲಾಗಿದೆ.<br><br>ಗುತ್ತಿಗೆಯಡಿ ನಿರ್ಮಿಸಿರುವ ಕಾಮಗಾರಿಗಳನ್ನು 5 ವರ್ಷಗಳ ಅವಧಿಗೆ (1 ವರ್ಷದ DLP ಅವಧಿ ಒಳಗೊಂಡಂತೆ) ಕಾರ್ಯಾಚರಣೆ ಮತ್ತು ನಿರ್ವಹಣೆಗೆ ಕರಾರಿನಲ್ಲಿ ಅವಕಾಶ ಕಲ್ಪಿಸಲಾಗಿದ್ದು ಇದರ ವೆಚ್ಚವನ್ನು ಸ್ಥಳೀಯ ಸಂಸ್ಥೆಯು ಭರಿಸಬೇಕಾಗಿರುತ್ತದೆ.<br><br>ಗುತ್ತಿಗೆ ಕರಾರಿನಂತೆ ಗುತ್ತಿಗೆದಾರರು ನಿರ್ವಹಣೆಯನ್ನು ಪ್ರಾರಂಭಿಸಿದ್ದು ನಿರ್ವಹಣಾ ವೆಚ್ಚವನ್ನು ನಗರಸಭೆ ವತಿಯಿಂದ ನೀಡದ ಕಾರಣ 14 ತಿಂಗಳ ಅವಧಿಗೆ ಕಾಮಗಾರಿಗಳನ್ನು ನಿರ್ವಹಿಸಿ ತದನಂತರ ಸ್ಥಗಿತಗೊಳಿಸಿರುತ್ತಾರೆ. |
| ಈ) | ಹಾಗಿದ್ದಲ್ಲಿ, ಇಷ್ಟು ದೊಡ್ಡ ಮೊತ್ತದ ಕಾಮಗಾರಿಯನ್ನು ಕಳಪೆ ಮಾಡಿರುವ ಸಂಸ್ಥೆಯ ವಿರುದ್ಧ ಹಾಗೂ ಇದಕ್ಕೆ ಅನುಮೋದನೆ ನೀಡಿದ ಅಧಿಕಾರಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ? | ಯೋಜನೆಯ ಅನುಷ್ಠಾನದ ಅವಧಿಯಲ್ಲಿ ವಿನ್ಯಾಸ ಮತ್ತು ಪರಿವೀಕ್ಷಣೆಗಾಗಿ PDMC ಯನ್ನು ನೇಮಿಸಿದ್ದು ಹಾಗೂ ಮಂಡಳಿಯ ಉಸ್ತುವಾರಿಯಲ್ಲಿ ಕಾಮಗಾರಿಗಳನ್ನು ಕೈಗೊಂಡಿದ್ದು ಕಾಮಗಾರಿಗೆ ಬಳಕೆಯಾದ ವಸ್ತುಗಳು ಮತ್ತು ಕಾಮಗಾರಿಯನ್ನು PDMC ರವರಿಂದ ತಪಾಸಣೆಗೆ ಒಳಪಟ್ಟಿದ್ದು ಕಾಮಗಾರಿಯು ಕಳಪೆಯಾಗಿರುವುದಿಲ್ಲ.<br><br>ಇದಲ್ಲದೇ ಕೇಂದ್ರ ಸರ್ಕಾರದಿಂದ ನಿಯೋಜಿಸಲ್ಪಟ್ಟ IRMA ಸಂಸ್ಥೆಯೂ ಸಹ ಯೋಜನೆಯ ಕಾಮಗಾರಿಗಳನ್ನು ವಿವಿಧ ಹಂತಗಳಲ್ಲಿ ಪರಿವೀಕ್ಷಣೆ ನಡೆಸಿರುತ್ತದೆ. ಪರಿವೀಕ್ಷಣೆ ವೇಳೆ ಗಮನಿಸಿದ ನ್ಯೂನತೆಗಳನ್ನು ನಿಯಮಾವಳಿಗಳಂತೆ ಸರಿಪಡಿಸಿ ಅನುಪಾಲನಾ ವರದಿಯನ್ನು ಸಲ್ಲಿಸಲಾಗಿರುತ್ತದೆ. ಆದ ಕಾರಣ ಕಾಮಗಾರಿಯನ್ನು ನಿರ್ವಹಿಸಿದ ಸಂಸ್ಥೆ ಅಥವಾ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುವ ಪ್ರಶ್ನೆಯು ಉದ್ಭವಿಸುವುದಿಲ್ಲ. |

ಸಂಖ್ಯೆ : ನಅಇ 06 ಯುಎಂಎಸ್ 2024

14/02/2024

(ಬಿ.ಎಸ್ ಸುರೇಶ)
ನಗರಾಭಿವೃದ್ಧಿ ಮತ್ತು
ನಗರ ಯೋಜನೆ ಸಚಿವರು